# Government of Karnataka
# Deposition Sheet (R.P.N.57) Form 4 Criminal
## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 405/2024 |

| | | |
|---|---|---|
| ಹೆಸರು | ಬಸವಂತ್ರಾಯ | ಪಿ. ಡಬ್ಲ್ಯೂ ಃ ೬ |
| ತಂದೆಯ– ಹೆಸರು | ಗುರುಬಸವಣ್ಣ | ಸಿ. ಡಬ್ಲ್ಯೂ ಃ ೬ |
| ವಯಸ್ಸು | 56 ವರ್ಷ | |
| ಉದ್ಯೋಗ | ಎ ಎಸ್ ಐ ದೇವದುರ್ಗ ಪೋಲಿಸ್ ಠಾಣೆ | **ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ** |
| ವಾಸ | ದೇವದುರ್ಗ | 29-04-2026 |

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎ.ಪಿ.ಪಿ ರವರಿಂದಃ

ನಾನು ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ವರೆಗೆ ದೇವದುರ್ಗ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಯಾಗಿ ನಂತರ ಪದೋನ್ನತಿ ಹೊಂದಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 15-05-2024 ರಂದು ಮಧ್ಯಾಹ್ನ 2-00 ರಿಂದ ರಾತ್ರಿ 9-00 ಗಂಟೆಯವರೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ಸಂಜೆ 6-30 ಗಂಟೆಗೆ , ಒಂದು ಗಣಕೀಕೃತ ದೂರು ಮತ್ತು ಅಕ್ರಮ ಮರಳು ಪಂಚನಾಮೆ, ಹಾಜರುಪಡಿಸಿದರು. ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂಬರ್ 150/2024 ರಂತೆ ಭಾರತೀಯ ದಂಡ ಸಂಹಿತೆ ಕಲಂ 379 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿರುತ್ತೇನೆ. ಸಾಕ್ಷಿ ಎಫ್ ಐ ಆರ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದೆ. ಅದೇ ದಿನ ಮುದ್ದೆಮಾಲನ್ನು ಜಮಾ ಮಾಡಲು ಮಾನ್ಯ ನ್ಯಾಯಾಲಯಕ್ಕೆ ಪಿ ಎಫ್ ಸಂಖ್ಯೆ 114/2024 ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರ ವಶಕ್ಕೆ ನೀಡಲು ಪರವಾನಿಗೆ ನೀಡಲು ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸ್ವತ್ತಿನ ವಿವರ ಪಟ್ಟಿಯನ್ನು ನೋಡಿ ಗುರುತಿಸಿದ್ದು ನಿ ಪಿ 4 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ: 16-05-2024 ರಂದು ಸಾಕ್ಷಿದಾರರಾದ ಚಾಸಾ-1, 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ: 17-05-2024 ರಂದು ಜಪ್ತಿ ಮಾಡಿದ ಮರಳನ್ನು ಜಮಾ ಮಾಡಿ ಕೊಳ್ಳಲು ಮಾನ್ಯ ಹಿರಿಯ ಭೂ ವಿಜ್ಞಾನಿಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಇವರಿಗೆ ಪತ್ರ ಬರೆದಿರುತ್ತೇನೆ. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ನಿ ಪಿ 5 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ದಿನಾಂಕ: 20-05-2024 ರಂದು ಚಾಸಾ-1 ಮತ್ತು 4 ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತಹಶೀಲ್ದಾರ ದೇವದುರ್ಗ ಕಚೇರಿಯಿಂದ ಪಹಣಿ ಪತ್ರಿಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ್ದು ನಿ ಪಿ 6 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 41(ಎ) ಪ್ರಕಾರ ನೋಟಿಸನ್ನು ಜಾರಿ ಮಾಡಿರುತ್ತೇನೆ. ಸಾಕ್ಷಿದಾರರು ಪೋಲಿಸ್ ನೋಟಿಸ್ ನ್ನು ನೋಡಿ ಗುರುತಿಸಿದ್ದು ನಿ ಪಿ 7 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆರೋಪಿ ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಆರೋಪಿ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ.

**ಪಾಟೀ ಸವಾಲುಃ ಆರೋಪಿತನ ಪರ ಶ್ರಿ ಎಸ್.ಪಿ. ವಕೀಲರಿಂದ:-**

1. ದೂರುದಾರರು ಒಬ್ಬರೆ ದೂರು ಕೊಡಲು ಬಂದಿರುತ್ತಾರೆ. ದೂರನ್ನು ಪಡೆದುಕೊಂಡ ನಂತರ ನಾನು ಸ್ಥಳಕ್ಕೆ ಪರಿಶೀಲನೆ ಮಾಡಲು ಹೋಗಿಲ್ಲ. ಮರಳು ಅಂದಾಜು 800 ಮೇಟ್ರಿಕ್ ಟನ್ ನಷ್ಟು ಇತ್ತು ಎಂದು ದೂರಿನ ಆಧಾರದ ಮೇರೆಗೆ ನಾನು ಹೇಳುತ್ತಿದ್ದೇನೆ. ನಾನು ಸ್ಥಳಕ್ಕೆ ಹೋಗಿ ಅಳತೆ ಮಾಡಿಲ್ಲ. ಫಿರ್ಯಾದಿ ದೂರು ಕೊಟ್ಟ ಆಧಾರದ ಮೇರೆಗೆ ಮರಳನ್ನು ಪಟ್ಟಾಜಾಗದಲ್ಲಿ ಶೇಖರಣೆ ಮಾಡಿಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಂದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. 1ನೇ ಆರೋಪಿಯ ಹೆಸರಿನಲ್ಲಿ ಜಮೀನಿನ ಪಹಣಿ ಇರುವುದಿಲ್ಲ ಎಂದರೆ ಸರಿ.

2. ಮರಳನ್ನು ಜಮಾ ಮಾಡಿಕೊಳ್ಳಲು ಗಣಿ ಮತ್ತು ಭೂ ವಿಜ್ಞಾನಿಗಳ ಇಲಾಖೆಯವರಲ್ಲಿ ಪತ್ರ ವ್ಯವಹಾರ ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡ ಮರಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿಯು ನದಿ ದಂಡೆಯ ಹತ್ತಿರ ಸಿಗುರುತ್ತದೆ ಬೇರೆ ಕಡೆ ಸಿಗುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಾಸಾ-1 ರವರು ಠಾಣೆಗೆ ಹಾಜರಾಗಿ ದೂರು ಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪೋಲಿಸ್ ಠಾಣೆಯಲ್ಲಿ ಪಡೆದುಕೊಂಡಿದ್ದೀರಾ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-1 ರವರು ಕಂದಾಯ ಅಧಿಕಾರಿಗಳಾಗಿರುವುದರಿಂದ ಅವರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.